ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸೆಷನ್ಸ್ ಕೇಸ್ ನಂಬ್ರ 19/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಘವೇಂದ್ರ | ಪ್ರಾಸಾಃ 1 |
| ತಂದೆಯ ಹೆಸರು | : | ಮಹಾಬಲ ಗೌಡ | ಚಾಸಾಃ 1 |
| ಪ್ರಾಯ | : | 45 ವರ್ಷ | **ದಿನಾಂಕಃ 18.12.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ಎಳಿಂಚಿತಾಯನಗರ, ಉಜಿರೆ ಗ್ರಾಮ, ಬೆಳ್ತಂಗಡಿ ತಾಲೂಕು. | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ಹೆಂಡತಿ, ಚಾಸಾ-3 ನನ್ನ ಹೆಂಡತಿಯ ತಾಯಿ, ಚಾಸಾ-4 ನನ್ನ ನೆರೆಕರೆಯವರು, ಚಾಸಾ-5 ನನ್ನ ಹೆಂಡತಿಯ ಸಂಬಂಧಿಕ. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಹೆಂಡತಿಯ ತಂದೆಯ ತಮ್ಮ. ಸುಮಾರು 2 ವರ್ಷಗಳ ಹಿಂದೆ ನಾನು, ನನ್ನ ಹೆಂಡತಿ ಸಜಿಪದಲ್ಲಿ ತೋಟದ ಕೆಲಸಕ್ಕೆ ಹೋಗಿ, ಮಾಲೀಕರ ಮನೆಯಲ್ಲಿ ವಾಸವಾಗಿದ್ದೆವು.

2. ದಿನಾಂಕ 15.11.2024 ರಂದು ನಾವು ಕೊಯ್ಯೂರು ಕ್ರಾಸ್ ನಲ್ಲಿರುವ ನನ್ನ ಅತ್ತೆಯ ಮನೆಗೆ ಬಂದಿದ್ದೆವು. ಆರೋಪಿಯು ನನ್ನ ಅತ್ತೆ ಮನೆಯಲ್ಲಿ ವಾಸವಾಗಿರುತ್ತಾರೆ. ದಿನಾಂಕ 18.11.2024 ರಂದು ರಾತ್ರಿ 10.30 ಗಂಟೆಗೆ ನನಗೆ ಮತ್ತು ಆರೋಪಿಯ ನಡುವೆ ಸಣ್ಣ ಮಾತುಕತೆಯಾಗಿ, ಗೋಡೆಯ ಮೇಲಿದ್ದಂತಹ ಆ್ಯಸಿಡ್ ಬಾಟಲಿಯನ್ನು ನಾನು ತೆಗೆಯುವಾಗ, ಅದು ನನ್ನ ಎಡಕಿವಿಯಿಂದ ಮೈಮೇಲೆ ಎಲ್ಲಾ ಬಿದ್ದಿರುತ್ತದೆ, ಆಗ ನನಗೆ ಉರಿ ಬಂದಿರುತ್ತದೆ. ನನ್ನ ಹೆಂಡತಿಯು ನನ್ನನ್ನು ಕಾರಿನಲ್ಲಿ ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ಅಲ್ಲಿ ವೈದ್ಯರು ಮಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದ್ದು ಅದರಂತೆ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ಕರೆತಂದು ದಾಖಲು ಮಾಡಿರುತ್ತಾರೆ. ನಮ್ಮ ನಡುವೆ ಆದ ಮಾತುಕತೆ ಕುಟುಂಬದ ವಿಷಯದಲ್ಲಿ ಆಗಿರುತ್ತದೆ, ನಿಖರವಾಗಿ ಯಾವ ಕಾರಣಕ್ಕಾಗಿ ಆಗಿರುತ್ತದೆಂದು ನೆನಪಿಲ್ಲ. ಆಸ್ಪತ್ರೆಯಲ್ಲಿ ನನ್ನನ್ನು ವಿಚಾರಿಸಲು ಯಾರು ಬಂದಿರುತ್ತಾರೆಂದು ನನಗೆ ನೆನಪಿರುವುದಿಲ್ಲ

3. ಸಾಕ್ಷಿ ಹೇಳಿಕೆ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು **ನಿ.ಪಿ.1** ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಎಲ್ಲಿ ಸಹಿ ಹಾಕಿರುತ್ತೇನೆಂದು ನೆನಪಿಲ್ಲ, ಅದರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ಆರೋಪಿಯು ನನ್ನ ಮೈಮೇಲೆ ಆ್ಯಸಿಡ್ ಸುರಿದಿರುತ್ತಾರೆಂದು ನಾನು ನಿಪಿ-1 ರಲ್ಲಿ ಹೇಳಿರುವುದಿಲ್ಲ.

4. ಘಟನಾ ಸ್ಥಳದ ಮಹಜರು ಮತ್ತು ಕರಡು ನಕಾಶೆಯಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ-2 ಮತ್ತು 3** ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು **ನಿ.ಪಿ.2(ಎ) ಮತ್ತು ನಿಪಿ-3(ಎ)** ಎಂದು ಗುರುತಿಸಲಾಯಿತು. ನಿಪಿ-2 ಮತ್ತು 3 ಕ್ಕೆ ಎಲ್ಲಿ ಸಹಿ ಹಾಕಿರುತ್ತೇನೆಂದು ನೆನಪಿಲ್ಲ, ಅದರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ತಕ್ಷೀರು ಸ್ಥಳದ ಮಹಜರನ್ನು ಮತ್ತು ನಕಾಶೆಯನ್ನು ತಯಾರಿಸಿರುವುದಿಲ್ಲ ಮತ್ತು ಯಾವುದೇ ಸ್ವತ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ಎರಡು ಪೋಟೊಗಳನ್ನು ತೋರಿಸಲಾಗಿ ಅದನ್ನು ನಮ್ಮ ಅತ್ತೆಯ ಮನೆಯಲ್ಲಿ

ತೆಗೆದಿರುವುದಾಗಿ ನುಡಿಯುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ಪೋಟೋಗಳನ್ನು **ನಿಪಿ-4(2)** ಎಂದು ಗುರುತಿಸಲಾಯಿತು. ನಿಪಿ-4 ನ್ನು ಪೋಲಿಸರು ಮನೆಗೆ ಬಂದಾಗ ತೆಗೆಯಲಾಗಿರುತ್ತದೆ. ಇನ್ನೊಂದು ಪೋಟೋವನ್ನು ತೋರಿಸಲಾಗಿ ಅದನ್ನು ವೆನ್ಲಾಕ್ ಆಸ್ಪತ್ರೆಯಲ್ಲಿ ತೆಗೆದಿರುವುದಾಗಿ ನುಡಿಯುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ಪೋಟೋಗಳನ್ನು **ನಿಪಿ-5** ಎಂದು ಗುರುತಿಸಲಾಯಿತು.

5. ನನ್ನ ಮೈ ಮೇಲೆ ಆ್ಯಸಿಡ್ ಬಿದ್ದ ಸಮಯದಲ್ಲಿ ನಾನು ಒಂದು ಅಂಗಿಯನ್ನು ಧರಿಸಿದ್ದೆ ಅದರ ಬಣ್ಣ ಈಗ ನೆನಪಿಲ್ಲ. ಅದನ್ನು ನೋಡಿದರೆ ಗುರುತಿಸಬಲ್ಲೆ. ತಿಳಿ ಹಸಿರು ಬಣ್ಣದ ಕ್ಲಾತ್ ಮೌಲ್ಡೆಡ್ ಕವರಿನಲ್ಲಿ ಪ್ಯಾಕ್ ಮಾಡಿ ಸೀಲು ಹಾಕಲಾದ ಸ್ವತ್ತನ್ನು ತೆರೆದ ನ್ಯಾಯಾಲಯದಲ್ಲಿ ಅನುಮತಿ ಮೇರೆಗೆ ತೆರೆದು ನೋಡಲಾಗಿ, ಅದರಲ್ಲಿ ಬಿಳಿ ಬಣ್ಣದ ಹಳದಿ ಚೌಕಗಳಿರುವ ಅಂಗಿ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ಎಂ.ಒ-1** ಎಂದು, ಗುರುತಿಸಲಾಯಿತು. ಎಂ.ಒ-1 ನ್ನು ಯಾರಿಗೆ, ಎಲ್ಲಿ ನೀಡಲಾಗಿರುತ್ತದೆಂದು ನನಗೆ ಗೊತ್ತಿಲ್ಲ.

6. ತಿಳಿ ಹಸಿರು ಬಣ್ಣದ ಕ್ಲಾತ್ ಮೌಲ್ಡೆಡ್ ಕವರಿನಲ್ಲಿ ಪ್ಯಾಕ್ ಮಾಡಿ ಸೀಲು ಹಾಕಲಾದ ಸ್ವತ್ತನ್ನು ತೆರೆದ ನ್ಯಾಯಾಲಯದಲ್ಲಿ ಅನುಮತಿ ಮೇರೆಗೆ ತೆರೆದು ನೋಡಲಾಗಿ, ಅದರಲ್ಲಿ ಗಾಜಿನ ಬಾಟಲಿಯ ಒಳಗೆ ಒಂದು ಸಣ್ಣ ಪ್ಲಾಸ್ಟಿಕ್ ಬಾಟಲಿ ಇದ್ದು , ಅದನ್ನು ನೋಡಿ ಅದೇ ಬಾಟಲಿಯಲ್ಲಿರುವ ಆ್ಯಸಿಡ್ ತನ್ನ ಮೈ ಮೇಲೆ ಬಿದ್ದಿರುವುದಾಗಿ ನುಡಿಯುತ್ತಾರೆ. ಸಣ್ಣ ಪ್ಲಾಸ್ಟಿಕ್ ಬಾಟಲಿಯನ್ನು **ಎಂ.ಒ-2** ಎಂದು, ಗುರುತಿಸಲಾಯಿತು. ಎಂ.ಒ-2 ನ್ನು ಯಾರಿಗೆ, ಎಲ್ಲಿ

ನೀಡಲಾಗಿರುತ್ತದೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ನ್ಯಾಯಾಲಯದ ಮುಂದಿರುವ ಕಡತ ಮತ್ತು ಸಾಕ್ಷಿಯ ಹೇಳಿಕೆಗಳನ್ನು ಗಮನಿಸಿ, ಸರಕಾರಿ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ. )**

**ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

7. ನನ್ನ ಅತ್ತೆ ಮನೆಯ ಬಾತ್ ರೂಂಗೆ ಚಿಲಕ ಇರುವುದಿಲ್ಲ ಎಂದರೆ ಸರಿ. ದಿನಾಂಕ 18.11.2024 ರಂದು ರಾತ್ರಿ 8.30 ಗಂಟೆಗೆ ನನ್ನ ಹೆಂಡತಿ ಸ್ನಾನಕ್ಕೆ ಹೋದಾಗ ಬಾತ್ ರೂಂಗೆ ಚಿಲಕ ಇಲ್ಲದೇ ಇರುವುದರಿಂದ ಆ ಕಡೆ ಸ್ವಲ್ಪ ಗಮನ ನೀಡುವಂತೆ ನನ್ನ ಹೆಂಡತಿ ನನ್ನ ಬಳಿ ತಿಳಿಸಿ ಹೋಗಿರುತ್ತಾಳೆ ಎಂದರೆ ಸರಿಯಲ್ಲ. ಸ್ವಲ್ಪ ಹೊತ್ತಿನಲಿ ನನ್ನ ಹೆಂಡತಿ ಜೋರಾಗಿ ಆರೋಪಿಯ ಬಳಿ ಅಲ್ಲಿಂದ ಹೋಗುವಂತೆ ಕೂಗಿ ಹೇಳುತ್ತಿದ್ದುದ್ದನ್ನು ಕೇಳಿ ನಾನು ಕೂಡಲೇ ಬಾತ್ ರೂಂ ಬಳಿ ಹೋಗಿದ್ದು, ಆಗ ಆರೋಪಿ ಅಲ್ಲಿ ನಿಂತುಕೊಂಡಿದ್ದದರು ಎಂದರೆ ಸರಿಯಲ್ಲ. ಆಗ ನಾನು ಆರೋಪಿಗೆ ಬಾತ್ ರೂಂಗೆ ಚಿಲಕ ಇಲ್ಲದೇ ಇದ್ದರೂ ಕೂಡ ನೀವು ಯಾಕೆ ಬಾತ್ ರೂಂ ಬಳಿ ಹೋಗಿದ್ದು ಎಂದು ಕೇಳಿದ್ದು ಇದರಿಂದ ಕೋಪಗೊಂಡ ಆರೋಪಿ ನನ್ನನ್ನು ಕುರಿತು ರಂಡೇ ಮಗ ಬೇವರ್ಸಿ ನಡಿ ಇಲ್ಲಿಂದ ಎಂದು ಬೈದು, ಜಗಳಕ್ಕೆ ಇಳಿದಿರುತ್ತಾನೆಂದರೆ ಸರಿಯಲ್ಲ. ಬಳಿಕ ನಾನು ಬಾತ್ ರೂಂನಿಂದ ಬಂದು ಮನೆಯ ಎದುರು ಸಿಟ್ ಔಟ್ ನಲ್ಲಿ ಮಲಗಿ ವಿಶ್ರಾಂತಿ ಪಡೆಯುತ್ತಿದ್ದಾಗ ರಾತ್ರಿ 10.30 ಗಂಟೆಗೆ ಆರೋಪಿ ತನ್ನ ಕೈಯಲ್ಲಿ ಬಾಟಲಿಯನ್ನು ಹಿಡಿದುಕೊಂಡು ಬಂದು ಅದರಲ್ಲಿದ್ದ ದ್ರವವನ್ನು ನನ್ನ ಮುಖ ಹಾಗೂ ಕುತ್ತಿಗೆಗೆ ಎರೆಚಿರುತ್ತಾರೆಂದರೆ ಸರಿಯಲ್ಲ. ನಂತರ ನನಗೆ ಉರಿ ಬರಲು ಪ್ರಾರಂಬಿಸಿದ್ದು

ನೋಡಲಾಗಿ ಅದು ಆರೋಪಿಯು ರಬ್ಬರ್ ಟ್ಯಾಪಿಂಗ್ ಗೆ ಉಪಯೋಗಿಸುವ ಆ್ಯಸಿಡ್ ಅಗಿರುತ್ತದೆಂದರೆ ಸರಿಯಲ್ಲ. ಆರೋಪಿಯು ಎರಚಿದ ಆ್ಯಸಿಡ್ ನನ್ನ ಬಳಿ ಸ್ವಲ್ಪ ದೂರದಲ್ಲಿದ್ದ ನನ್ನ ಮಗ ಶಾಶ್ವತ್ ನ ಹಣೆಯ ಮೇಲೆ ಕೂಡ ಒಂದು ಹನಿ ಬಿದ್ದಿರುತ್ತದೆ ಎಂದರೆಸರಿಯಲ್ಲ. ಆರೋಪಿಯು ನನ್ನ ಪತ್ನಿ ಸ್ನಾನ ಮಾಡುವುದನ್ನು ನೋಡಲು ಹೋದದ್ದನ್ನು ಪ್ರಶ್ನಿಸಿದ ವಿಚಾರವಾಗಿ ಕೋಪಗೊಂಡ ಆರೋಪಿಯು ಎಂ,ಒ-2 ರಲ್ಲಿದ್ದ ಆ್ಯಸಿಡನ್ನು ನನ್ನ ಮೈಮೇಲೆ ಎರಚಿರುತ್ತಾನೆಂದರೆ ಸರಿಯಲ್ಲ.

8. ನಾನು ವೆನ್ಲಾಕ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಸಮಯ ದಿನಾಂಕ 19.11.2024 ರಂದು ಮದ್ಯಾಹ್ನ 3 ಗಂಟೆಗೆ ಬೆಳ್ತಂಗಡಿ ಪೊಲೀಸರು ನನ್ನನ್ನುವಿಚಾರಿಸಲು ಬಂದಿದ್ದು ನಾನು ನಿಪಿ-1 ರಂತೆ ಹೇಳಿಕೆ ದೂರನ್ನು ನೀಡಿರುತ್ತೆನೆಂದರೆ ಸರಿಯಲ್ಲ.

9. ದಿನಾಂಕ 04.12.2024 ರಂದು ಪೋಲಿಸರು ಘಟನಾ ಜಾಗಕ್ಕೆ ಬಂದಿದ್ದು ಜಾಗವನ್ನು ನಾನು ತೋರಿಸಿಕೊಟ್ಟ ಮೇರೆಗೆ ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಮದ್ಯಾಹ್ನ 3.49 ರಿಂದ 4.38 ರವರೆಗೆ ತಯಾರಿಸಿ, ಎಂ.ಒ-1 ಮತ್ತು 2 ನ್ನು ವಶಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ.

10. ನಾನು ರಬ್ಬರ್ ಟ್ಯಾಪಿಂಗ್ ಕೆಲಸ ಮಾಡುವುದಿಲ್ಲ. ಆರೋಪಿ ರಬ್ಬರ್ ಟ್ಯಾಪಿಂಗ್ ಕೆಲಸ ಮಾಡುತ್ತಾರೆ. ಆ್ಯಸಿಡನ್ನು ರಬ್ಬರ್ ಶೀಟ್ ಮಾಡುವಾಗ ಬಳಸಲಾಗುತ್ತದೆ. ರಬ್ಬರ್ ಶೀಟ್ ಮಾಡಲು ಬೇರೆಯೇ ಶೆಡ್ ಇದ್ದು ಅಲ್ಲಿ ಅದಕ್ಕೆ ಪ್ರತ್ಯೇಕವಾಗಿ ಮಿಶಿನ್ ಗಳು ಬೇಕಾಗುತ್ತದೆ. ಸಾಮಾನ್ಯವಾಗಿ ಸದರಿ ಆ್ಯಸಿಡ್

ಗಳನ್ನು ರಬ್ಬರ್ ಶೀಟ್ ಮಾಡುವ ಶೆಡ್ ಗಳಲ್ಲಿ ಇಡುತ್ತಾರೆ ಎಂದರೆ ಸರಿ. ನನ್ನ ಮೈ ಮೇಲೆ ಬಿದ್ದಂತಹ ಆ್ಯಸಿಡನ್ನು ಆರೋಪಿ ಟ್ಯಾಲೆಟ್ ತೊಳೆಯಲೆಂದು ತಂದು ಗೋಡೆಯ ಮೇಲೆ ಇಟ್ಟಿದ್ದರು. ಆ್ಯಸಿಡ್ ಬಾಟಲಿಯನ್ನು ನಾನೇ ತೆಗೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಈಗ ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುತ್ತೇವೆ ಮತ್ತು ಆ ಕಾರಣಕ್ಕಾಗಿ ನಿಜ ವಿಚಾರವನ್ನು ಮುಚ್ಚಿಟ್ಟು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಇರುವುದಿಲ್ಲ ಎಂದು ನುಡಿದಿರುತ್ತಾರೆ.</u>**

**<u>ಮರುವಿಚಾರಣೆಃ</u> ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.